# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಐಎಸ್‌ಓ ಪ್ರಮಾಣೀಕೃತ ಶಾಸನಬದ್ಧ ಸಹಕಾರಿ ಸಂಸ್ಥೆ
'ನಿರ್ಮಾಣ ಭವನ', ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂರವಾಣಿ: 080 23378375-80, ಇ-ಮೇಲ್: souharda@souharda.coop

ಸಂಖ್ಯೆ:ಸಂಸ/ಆಡಳಿತ/ಚುನಾವಣೆ/26/2016-17 ದಿನಾಂಕ:28.10.2016

**ಚುನಾವಣಾ ವಿಷಯ : ಅತ್ಯಂತ ಜರೂರು**

ಇವರಿಗೆ:

ಕರ್ನಾಟಕ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ

ಮಾನ್ಯ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರ

ತೀವ್ರ ಗಮನಕ್ಕೆ.

ಮಾನ್ಯರೇ,

ವಿಷಯ : ತಮ್ಮ ಸಹಕಾರಿಯ ಡೆಲಿಗೇಟ್ ಆಯ್ಕೆ ಬಗ್ಗೆ ನಡೆಸಿರುವ ಆಡಳಿತ ಮಂಡಲಿ ಸಭೆಯ ನಡವಳಿಯ ಮೂಲ ವಹಿಯನ್ನು ಪರಿಶೀಲನೆಗಾಗಿ ಹಾಜರುಪಡಿಸುವ ಕುರಿತು.

ಉಲ್ಲೇಖ : ಸಹಕಾರ ಚುನಾವಣಾ ಪ್ರಾಧಿಕಾರದ ಪತ್ರ ಸಂಖ್ಯೆ ಚುನಾವಣೆ/ವಿವ/42/2015-16 ದಿನಾಂಕ 22-10-2016, ಸ್ವೀಕೃತಿ ದಿನಾಂಕ 27-10-2016.

ಆತ್ಮೀಯ ಸಹಕಾರಿ ಬಂಧುಗಳೇ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಆಡಳಿತ ಮಂಡಲಿ ಹಾಗೂ ಪದಾಧಿಕಾರಿಗಳ ಚುನಾವಣೆ ದಿನಾಂಕ 27-11-2016ರಂದು ನಿಗದಿಯಾಗಿರುವುದು ತಮಗೆ ತಿಳಿದೇ ಇದೆ. ಇದರ ಸಂಬಂಧ ದಿನಾಂಕ 18-10-2016ರಂದು ಡೆಲಿಗೇಟ್ ನಮೂನೆ ಹಾಗೂ ಗುರುತಿನ ಚೀಟಿಗಳನ್ನು ಸಹಕಾರಿಗಳಿಗೆ ಕಳುಹಿಸಿ ಕೊಡಲಾಗಿದೆ. ಇದಕ್ಕೆ ಪೂರಕವಾಗಿ ಮಾನ್ಯ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಇವರು ಉಲ್ಲೇಖದ ಪತ್ರವನ್ನು ಬರೆದು ಸದಸ್ಯ ಸಹಕಾರಿಗಳಲ್ಲಿ ಡೆಲಿಗೇಟ್ ಆಯ್ಕೆ ಬಗ್ಗೆ ನಡೆಸಿರುವ **ಆಡಳಿತ ಮಂಡಲಿ ಸಭೆಯ ನಡವಳಿಗಳ ದೃಢೀಕೃತ ಪ್ರತಿ ಮತ್ತು ನಡವಳಿಯ ಮೂಲ ವಹಿಯನ್ನು ಪರಿಶೀಲನೆಗಾಗಿ ತಮ್ಮ ಕಛೇರಿಗೆ** ಹಾಜರುಪಡಿಸಲು ತಿಳಿಸಿರುತ್ತಾರೆ.

ಈ ಕುರಿತು ಅನೇಕ ಬಾರಿ ಮಾನ್ಯ ಚುನಾವಣಾಧಿಕಾರಿಗಳೊಂದಿಗೆ ಮೌಖಿಕವಾಗಿ ಚರ್ಚಿಸಿ, ಸದರಿ ಕಾರ್ಯವು ಪ್ರಾಯೋಗಿಕವಾಗಿ ಕಷ್ಟಸಾಧ್ಯ ಹಾಗೂ ಸಹಕಾರಿಗಳಿಗೆ ಆರ್ಥಿಕ ಹೊರೆಯಾಗುತ್ತದೆ ಎಂಬುದನ್ನು ಮನವರಿಕೆ ಮಾಡಿ ಕೊಡಲು ಪ್ರಯತ್ನಿಸಲಾಗಿದೆ. ಆದರೂ ಸಹ ದಿನಾಂಕ 27-10-2016ರಂದು ಸಾಯಂಕಾಲ 4.30 ಗಂಟೆಗೆ ಉಲ್ಲೇಖ ಪತ್ರವನ್ನು ನೀಡಿ, ಅದರಂತೆ ಕ್ರಮವಿಡಲು ತಿಳಿಸಿರುತ್ತಾರೆ.

ಆದ್ದರಿಂದ, ತಾವುಗಳು ಪ್ರಥಮ ಆದ್ಯತೆ ಮೇರೆಗೆ ತಮ್ಮ ತಮ್ಮ **ಸಹಕಾರಿಯ ಡೆಲಿಗೇಟ್ ಆಯ್ಕೆಯ ಬಗ್ಗೆ ನಡೆಸಿರುವ ಆಡಳಿತ ಮಂಡಲಿ ಸಭೆಯ ನಡವಳಿಗಳು ದಾಖಲಾಗಿರುವ ಮೂಲ ವಹಿಯನ್ನು** (ಮಂಡಲಿ ಠರಾವಿನ ಪುಸ್ತಕ) ಪರಿಶೀಲನೆಗಾಗಿ ದಿನಾಂಕ 07-11-2016ರೊಳಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿಗೆ ಸಲ್ಲಿಸಲು ಕೋರಿದೆ.

ವಂದನೆಗಳೊಂದಿಗೆ,

Karnataka State Souharda Federal Cooperative Ltd. Reg. No. RSR/SOU/ACT/136/ Regn 051/2001-02 dated 04-01-2002 * Bangalore *

ಸಹಿ/-
(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು